**ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ  ದರ್ಜೆಯ ನ್ಯಾಯಿಕ  ದಂಡಾಧಿಕಾರಿಯವರ**
**ನ್ಯಾಯಾಲಯ  ಮುಂಡಗೋಡ.**

ಸಿಸಿ ನಂಃ 159/2024

ಸಿ ಡಬ್ಲುಃ 01

ಪಿ ಡಬ್ಲುಃ 01

| | |
|---|---|
| ಸಾಕ್ಷಿದಾರರ ಹೆಸರು | ಗಣಪತಿ  ಗುಗ್ರೇರ |
| ತಂದೆಯ ಹೆಸರು | ಪ್ರಕಾಶ |
| ವಯಸ್ಸು | 28 ವರ್ಷ |
| ಉದ್ಯೋಗ | ರೈತಾಪಿ |
| ವಾಸ್ತವ್ಯ | ಕೊಡಂಬಿ, ತಾಲೂಕು ಮುಂಡಗೋಡ. |

ಸಾಕ್ಷಿಯನ್ನು ದಿನಾಂಕ **13.01.2026.** ರಂದು ಕರೆಸಲಾಯಿತು ಮತ್ತು ಪ್ರಮಾಣ ವಚನ ಮಾಡಿಸಲಾಯಿತು.

**ಮುಖ್ಯ  ವಿಚಾರಣೆಃ ಎ ಪಿ ಪಿ ಯವರಿಂದಃ**

ದಿನಾಂಕಃ 23.02.2024 ರಂದು  ನನ್ನ ತಮ್ಮ ಬಸವರಾಜ  ಕೊಪ್ಪರಸಿಕೊಪ್ಪದ  ಸಂತೆಗೆ  ದ್ವಿಚಕ್ರ ವಾಹನದ ಮೇಲೆ ಹೋಗಿ ಸಮಾರು 4.00 ಗಂಟೆಗೆ  ವಾಪಸ್ಸು  ಬರುತ್ತಿದ್ದ. ಅಲ್ಲಿಯ ಸ್ಥಳೀಕರೊಬ್ಬರು ನನಗೆ ಕರೆ ಮಾಡಿ,  ನನ್ನ ತಮ್ಮ ದ್ವಿಚಕ್ರ ವಾಹನದ ಮೇಲಿಂದ ಬಿದಿದ್ದಾನೆಂದು  ತಿಳಿಸಿದರು. ನಾನು  ಅಲ್ಲಿಗೆ ಬರುವಷ್ಟರಲ್ಲಿ   ಸ್ಥಳೀಕರು ನನ್ನ ತಮ್ಮನನ್ನು ತುರ್ತು ಚಿಕಿತ್ಸೆ  ವಾಹನದ ಮೂಲಕ ಪಾಳಾ ಸರ್ಕಾರಿ ಆಸ್ಪತ್ರೆಗೆ  ಕರೆದುಕೊಂಡು ಹೋಗಿದ್ದು, ಅಲ್ಲಿಂದ ಮುಂಡಗೋಡ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತಾರೆ.  ನಾನು ಮುಂಡಗೋಡ ಸರ್ಕಾರಿ ಆಸ್ಪತ್ರೆಯಲ್ಲಿ ನನ್ನ ತಮ್ಮನನ್ನು ನೋಡಿರುತ್ತೇನೆ.  ನನ್ನ ತಮ್ಮನ ತಲೆಗೆ ಮತ್ತು ಕಿವಿಗೆ  ಭಾರಿ ರಕ್ತ ಗಾಯವಾಗಿತ್ತು. ಮುಂಡಗೋಡ ಸರ್ಕಾರಿ ಆಸ್ಪತ್ರೆಯಲ್ಲಿ  ಹೊಲಿಗೆಯನ್ನು  ಹಾಕಿ ಚಿಕಿತ್ಸೆಯನ್ನು ನೀಡಿದ್ದು , ಆದರೆ  ಹೆಚ್ಚಿನ ಚಿಕಿತ್ಸೆಗಾಗಿ ನನ್ನ ತಮ್ಮನನ್ನು  ಶಿರಸಿಯ ಸಿಟಿ ಸ್ಕಾನಿಂಗ್ ಸೆಂಟರ್  ಗೆ ಕರೆದುಕೊಂಡು ಹೋಗುವಂತೆ ಸೂಚಿಸಿರುತ್ತಾರೆ.  ನಾವು  ಅಲ್ಲಿ   ಒಂದು ತಿಂಗಳ ಕಾಲ ಇದ್ದಿದ್ದು,  ಆದರೆ   ಅಲ್ಲಿ  ಗುಣಮುಖವಾಗದೇ  ಇದ್ದಿದ್ದರಿಂದ,   ನನ್ನ  ತಮ್ಮನನ್ನು  ಹುಬ್ಬಳ್ಳಿಯ  ಕೀಮ್ಸ  ಆಸ್ಪತ್ರೆಗೆ ಕರೆದುಕೊಂಡು ಹೋಗಲಾಯಿತು.  ಆದರೆ  ಚಿಕಿತ್ಸೆ ಫಲಕಾರಿಯಾಗದೇ ನನ್ನ ತಮ್ಮ ಅಲ್ಲಿ ತೀರಿಕೊಂಡಿರುತ್ತಾನೆ. ನಾನು 23 ನೇ ತಾರೀಖಿನಂದು  ಪೋಲಿಸರು ಮುಂಡಗೋಡ ಸರ್ಕಾರಿ ಆಸ್ಪತ್ರೆಗೆ ಬಂದಾಗ, ದೂರನ್ನು ದಾಖಲಿಸಿರುತ್ತೇನೆ. ಇಷ್ಟನ್ನು ಹೊರತುಪಡಿಸಿ, ನನಗೆ ಈ ಪ್ರಕರಣದ ಬಗ್ಗೆ  ಬೇರೆ ಯಾವುದೇ  ಮಾಹಿತಿ ಇಲ್ಲ .

ಸಾಕ್ಷಿಯು ನ್ಯಾಯಾಲಯದ ಮುಂದಿರುವ  ದೂರನ್ನು   ನೋಡುತ್ತಿದ್ದು  ಅದನ್ನು ಗುರುತಿಸುತ್ತೇನೆ,  ಅದನ್ನು **ನಿಪಿ.1** ಎಂದು, ಹಾಗೂ ಅದರಲ್ಲಿರುವ  ಸಹಿ ನನ್ನದೇ ಆಗಿದ್ದು, ನನ್ನ ಸಹಿಯನ್ನು **ನಿಪಿ.1 ಎ** ಎಂದು ಗುರುತಿಸಲಾಯಿತು.

ಸಾಕ್ಷಿಯು ನ್ಯಾಯಾಲಯದ ಮುಂದಿರುವ  ಪ್ರಥಮ ವರ್ತಮಾನ ವರದಿಯನ್ನು   ನೋಡುತ್ತಿದ್ದು  ಅದನ್ನು ಗುರುತಿಸುತ್ತೇನೆ,   ಅದನ್ನು **ನಿಪಿ.2** ಎಂದು, ಹಾಗೂ ಅದರಲ್ಲಿರುವ  ಸಹಿ ನನ್ನದೇ ಆಗಿದ್ದು, ನನ್ನ ಸಹಿಯನ್ನು **ನಿಪಿ.2 ಎ** ಎಂದು ಗುರುತಿಸಲಾಯಿತು.

ಅಲ್ಲಿಯ ಸ್ಥಳೀಕರು  ಎದುರು ಬದುರು   ಅಪಘಾತವಾಗಿರುತ್ತದೆ ಎಂದು ತಿಳಿಸಿರುತ್ತಾರೆ.  ಯಾರ ತಪ್ಪಿನಿಂದ ಅಪಘಾತವಾಗಿರುತ್ತೆಂದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ  ಸ ಸ ಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**<u>ಪಾಟೀ ಸವಾಲುಃ ಎ ಪಿ ಪಿ ಯವರಿಂದಃ</u>**

ನಾನು ದೂರನ್ನು ದಿನಾಂಕಃ 28.02.2024 ರಂದು  ದಾಖಲಿಸಿರುತ್ತೇನೆ  ಎಂದರೆ ಸರಿ. ನನಗೆ  ಚಾಸಾ 7 ರವರು ಕರೆ ಮಾಡಿ ಕರೆದಿರುತ್ತಾರೆ ಎಂದರೆ ಸರಿ. ಚಾಸಾ 7 ರವರು ನನಗೆ  ಆರೋಪಿಯು  ತನ್ನ ವಾಹನವನ್ನು ಅತಿವೇಗ ಮತ್ತು ಅಜಾಗೃಕತೆಯಿಂದ ಚಲಾಯಿಸಿಕೊಂಡು ಬಂದು  ಅಪಘಾತಪಡಿಸಿರುತ್ತಾನೆ ಎಂದು ತಿಳಿಸಿರುತ್ತಾರೆ ಎಂದರೆ,  ನಾನು ಸ್ಥಳದಲ್ಲಿರಲಿಲ್ಲ ಎಂದು  ನುಡಿಯುತ್ತಾರೆ. ಆರೋಪಿಯ ಹಿಂಬದಿಯ ಸವಾರಳಾದ  ಚಾಸಾ 6 ರವರಿಗೆ ಸಣ್ಣ ಪುಟ್ಟ ಗಾಯವಾಗಿದ್ದು, ಆರೋಪಿಗೆ ಯಾವುದೇ ಗಾಯವಾಗಿದ್ದು ಇರುವುದಿಲ್ಲ ಎಂದು ಚಾಸಾ 7 ರವರು ನನಗೆ ಹೇಳಿದರೂ ಎಂದರೆ, ನನಗೆ ಗೊತ್ತಿಲ್ಲ.  ನಾನು ಈ ಬಗ್ಗೆ ದೂರಿನಲ್ಲಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ.

ದಿನಾಂಕಃ 22.04.2024 ರಂದು   ಆಸ್ಪತ್ರೆಯಲ್ಲಿ  ನನ್ನ ಮತ್ತು ಪಂಚರ ಸಮಕ್ಷಮದಲ್ಲಿ ಶವಪಂಚನಾಮೆಯನ್ನು ಜರುಗಿಸಿರುತ್ತಾರೆ ಎಂದರೆ ಸರಿ.  ಸದರಿ ಸಮಯಕ್ಕೆ  ಛಾಯಾ ಚಿತ್ರಗಳನ್ನೂ ಸಹ ತೆಗೆದುಕೊಂಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಸದರಿ ಸಂಗತಿಯನ್ನು ಒಪ್ಪಿಕೊಂಡಿದ್ದರಿಂದ,  ಶವಪಂಚನಾಮೆಯನ್ನು **ನಿಪಿ.3** ಎಂದು ಮತ್ತು ಸದರಿ ಸಮಯಕ್ಕೆ ತೆಗೆದ ಛಾಯಾ ಚಿತ್ರಗಳನ್ನು  ಭಾ.ಸಾ.ಅ.ನಿ. ಕಲಂ 65 ಬಿ ಪ್ರಮಾಣ ಪತ್ರ ಮತ್ತು ಸಿ.ಡಿ ಗೆ ಒಳಪಟ್ಟು ಅನುಕ್ರಮವಾಗಿ **ನಿಪಿ.  4 ಮತ್ತು ನಿಪಿ.5**   ಎಂದು,  ಗುರುತಿಸಲಾಯಿತು.

ದಿನಾಂಕಃ 29.02.2024 ರಂದು  ನಾನು ತೋರಿಸಿದ ಸ್ಥಳದಲ್ಲಿ ಪೋಲಿಸರು  ಪಂಚರಾದ ಚಾಸಾ 2 ಮತ್ತು 3 ರವರ ಸಮಕ್ಷಮ ಘಟನಾ ಸ್ಥಳದ ಪಂಚನಾಮೆಯನ್ನು  ಬೆಳಿಗ್ಗೆ  10.00 ಗಂಟೆಯಿಂದ 11.00 ಗಂಟೆಯವರೆಗೆ ಜರುಗಿಸಿರುತ್ತಾರೆ ಎಂದರೆ ಸರಿ.  ಸದರಿ ಪಂಚನಾಮೆಗೆ  ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿ.

ಸಾಕ್ಷಿಯು ನ್ಯಾಯಾಲಯದ ಮುಂದಿರುವ  ಪಂಚನಾಮೆಯನ್ನು   ನೋಡುತ್ತಿದ್ದು  ಅದನ್ನು ಗುರುತಿಸುತ್ತೇನೆ, ಅದನ್ನು **ನಿಪಿ.6** ಎಂದು, ಹಾಗೂ ಅದರಲ್ಲಿರುವ  ಸಹಿ ನನ್ನದೇ ಆಗಿದ್ದು, ನನ್ನ ಸಹಿಯನ್ನು **ನಿಪಿ.6 ಎ** ಎಂದು ಗುರುತಿಸಲಾಯಿತು. ಸದರಿ ಸಮಯಕ್ಕೆ ತೆಗೆದ ಛಾಯಾ ಚಿತ್ರಗಳನ್ನು  ಭಾ.ಸಾ.ಅ.ನಿ. ಕಲಂ 65 ಬಿ ಪ್ರಮಾಣ ಪತ್ರ ಮತ್ತು ಸಿ.ಡಿ ಗೆ ಒಳಪಟ್ಟು ಅನುಕ್ರಮವಾಗಿ **ನಿಪಿ.  7 ಮತ್ತು ನಿಪಿ.8**   ಎಂದು  ಗುರುತಿಸಲಾಯಿತು.

ಅದೇ ದಿನ ನಾನು  ಅಪಘಾತಕೊಳಗಾದ   ಮೋಟರ ಸೈಕಲನ್ನು ಹಾಜರುಪಡಿಸಿದ್ದು, ಅದೇ ಪಂಚರ ಸಮಕ್ಷಮ ಮಧ್ಯಾಹ್ನ 3.00 ಗಂಟೆಯಿಂದ 3.45 ಗಂಟೆಯವರೆಗೆ  ಪೋಲಿಸ್ ಠಾಣಾ ಆವರಣದಲ್ಲಿ  ಸದರಿ ವಾಹನಾ ಪರಿಶೀಲನಾ ಪಂಚನಾಮೆಯನ್ನು ಜರುಗಿಸಿರುತ್ತಾರೆ ಎಂದರೆ ಸರಿ. ಸದರಿ ಪಂಚನಾಮೆಗೆ  ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿ.

ಸಾಕ್ಷಿಯು ನ್ಯಾಯಾಲಯದ ಮುಂದಿರುವ  ಪಂಚನಾಮೆಯನ್ನು   ನೋಡುತ್ತಿದ್ದು  ಅದನ್ನು ಗುರುತಿಸುತ್ತೇನೆ, ಅದನ್ನು **ನಿಪಿ.9** ಎಂದು, ಹಾಗೂ ಅದರಲ್ಲಿರುವ  ಸಹಿ ನನ್ನದೇ ಆಗಿದ್ದು, ನನ್ನ ಸಹಿಯನ್ನು **ನಿಪಿ.9 ಎ** ಎಂದು ಗುರುತಿಸಲಾಯಿತು. ಸದರಿ ಸಮಯಕ್ಕೆ ತೆಗೆದ ಛಾಯಾ ಚಿತ್ರಗಳನ್ನು  ಭಾ.ಸಾ.ಅ.ನಿ. ಕಲಂ 65 ಬಿ ಪ್ರಮಾಣ ಪತ್ರ ಮತ್ತು ಸಿ.ಡಿ ಗೆ ಒಳಪಟ್ಟು ಅನುಕ್ರಮವಾಗಿ **ನಿಪಿ.  10 ಮತ್ತು ನಿಪಿ.11**   ಎಂದು  ಗುರುತಿಸಲಾಯಿತು.

ನಾನು ಪೋಲಿಸರ ಸಮಕ್ಷಮ ನನ್ನ ತಮ್ಮ ಚಿಕಿತ್ಸೆ  ಫಲಕಾರಿಯಾಗದೇ ದಿನಾಂಕಃ 22.04.2024  ರಂದು ಬೆಳಗಿನ ಜಾವ  5.50 ಗಂಟೆಗೆ  ಮೃತ ಪಟ್ಟಿರುತ್ತಾನೆಂದು ದಿನಾಂಕಃ 23.04.2024 ರಂದು ಮರುಹೇಳಿಕೆ ನೀಡಿರುತ್ತೇನೆ ಎಂದರೆ  ಹೌದು.  ಆರೋಪಿಯ ಅತಿವೇಗ ಮತ್ತು ನಿಶ್ಕಾಳಜಿತನದಿಂದಲೇ ಅಪಘಾತ ಸಂಭವಿಸಿರುತ್ತದೆ ಎಂದು ನನಗೆ ತಿಳಿದಿದ್ದರೂ ಸಹಿತ,  ಈ ಬಗ್ಗೆ  ನನಗೆ ಯಾರು ಹೇಳಿದ್ದು ಇರುವುದಿಲ್ಲ ಎಂದು ಸುಳ್ಳು  ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ

ಸರಿಯಲ್ಲ. ನಾವು ರಾಜಿ ಮಾಡಿಕೊಂಡಿದ್ದೇವೆ ಎಂದರೆ ಸರಿ. ನಾವು ರಾಜಿ ಮಾಡಿಕೊಂಡ ಕಾರಣ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಶ್ರೀ ಆರೋಪಿ ಪರ ವಕೀಲರಿಂದಃ**

ದೂರಿನಲ್ಲಿ ಪೋಲಿಸರು ಏನು ಬರೆದುಕೊಂಡಿರುತ್ತಾರೆ ಎಂದು ನನಗೆ ಹೇಳಲು ಬರುವುದಿಲ್ಲ ಎಂದರೆ ಸರಿ. ಅದೇ ರೀತಿ ಪಂಚನಾಮೆಗೂ ಸಹ ಮಾಹಿತಿ ನೀಡಿದ್ದು ಇರುವುದಿಲ್ಲ ಎಂದರೆ ಸರಿ. ಪೋಲಿಸರು ತಯಾರು ಮಾಡಿದ ದೂರು ಮತ್ತು ಪಂಚನಾಮೆಗಳಿಗೆ ಸಹಿ ಮಾಡು ಎಂದು ಹೇಳಿದ್ದು, ನಾನು ಸಹಿ ಮಾಡಿರುತ್ತೇನೆ, ಅದೇ ರೀತಿ ಛಾಯಾ ಚಿತ್ರಕ್ಕೆ ನಿಂತುಕೊಳ್ಳುವಂತೆ ಹೇಳಿದ್ದು, ನಾನು ನಿಂತುಕೊಂಡಿರುತ್ತೇನೆ ಎಂದರೆ ಸರಿ. ಘಟನೆಯ ಕಾಲಕ್ಕೆ ನಾನು ಕೋಡಂಬಿ ಗ್ರಾಮದಲ್ಲಿರುವ ನಮ್ಮ ಮನೆಯಲ್ಲಿದ್ದೆನು ಎಂದರೆ ಸರಿ. ನಾನು ಘಟನೆಯ ಕಾಲಕ್ಕೆ ಮನೆಯಲ್ಲಿದ್ದದ್ದರಿಂದ , ಅಪಘಾತ ಯಾರ ತಪ್ಪಿನಿಂದ ಸಂಭವಿಸಿರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ ಎಂದರೆ ಸರಿ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

Sd/-

**ಪ್ರ ದ ನ್ಯಾದಂ ಮುಂಡಗೋಡ.**